**All India Radio: Bangalore**
**National Bulletin In Kannada**
**09.04.2026  07.35 a.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**09.04.2026  07.35 a.m.**
**<><><><>**

ಮುಖ್ಯಾಂಶಗಳು

1. ಅಸ್ಸಾಂ, ಕೇರಳಂ ಮತ್ತು ಪುದುಚೇರಿ ವಿಧಾನಸಭಾ ಚುನಾವಣೆಗೆ ಮತದಾನ ಆರಂಭ ; ಭಾರಿ ಬಿಗಿ ಭದ್ರತೆ
2. ಕರ್ನಾಟಕದ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಮತದಾನ ಪ್ರಗತಿಯಲ್ಲಿ
3. ವಿಮಾನಗಳ ನಿಲುಗಡೆ ಶುಲ್ಕದಲ್ಲಿ ಶೇಕಡ ೨೫ರಷ್ಟು ಕಡಿತ ; ದೇಶೀಯ ವಿಮಾನಯಾನಕ್ಕೆ ಕೇಂದ್ರ ಸರ್ಕಾರದಿಂದ ಸರಣಿ ಪರಿಹಾರ ಪ್ರಕಟ
4. ಇಂದಿನಿಂದ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಮಾರಿಷಸ್ ಮತ್ತು ಯುಎಇ ಪ್ರವಾಸ
5. ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ : ಪಿ.ವಿ.ಸಿಂಧು, ಎಚ್‌ಎಸ್.ಪ್ರಣಯ್, ಆಯುಷ್ ಶೆಟ್ಟಿ  ಪ್ರಿ-ಕ್ವಾರ್ಟರ್ ಫೈನಲ್ ಪ್ರವೇಶ

<><><><>

ಅಸ್ಸಾಂ, ಕೇರಳ ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೇರಿ ವಿಧಾನಸಭಾ ಚುನಾವಣೆಯ ಮತದಾನ ಇದೀಗ ಸ್ವಲ್ಪ ಹೊತ್ತಿನ ಮುಂಚೆ ಆರಂಭವಾಗಿದೆ. ಅಸ್ಸಾಂನ ಎಲ್ಲಾ ೧೨೬ ಸ್ಥಾನಗಳಿಗೆ, ಕೇರಳದಲ್ಲಿ ೧೪೦ ಮತ್ತು ಪುದುಚೇರಿಯ ೩೦ ಸ್ಥಾನಗಳಿಗೆ ಒಂದೇ ಹಂತದಲ್ಲಿ ಮತದಾನ ನಡೆಯುತ್ತಿದೆ. ಬೆಳಿಗ್ಗೆ ೭ ಗಂಟೆಗೆ ಆರಂಭವಾಗಿರುವ ಮತದಾನ ಸಂಜೆ ೬ ಗಂಟೆಯವರೆಗೆ ನಡೆಯಲಿದೆ. ಮುಕ್ತ, ನ್ಯಾಯಸಮ್ಮತ ಮತ್ತು ಶಾಂತಿಯುತ ಮತದಾನ ಖಾತ್ರಿಪಡಿಸಿಕೊಳ್ಳಲು ಚುನಾವಣಾ ಆಯೋಗವು ಸಕಲ ವ್ಯವಸ್ಥೆಗಳನ್ನು ಕೈಗೊಂಡಿದೆ. ಕೇರಳಂದಲ್ಲಿ, ೧೪೦ ವಿಧಾನಸಭಾ ಸ್ಥಾನಗಳಿಗೆ ಒಟ್ಟು ೮೮೩ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಒಟ್ಟು ೨ ಕೋಟಿ ೭೧ ಲಕ್ಷ ಮತದಾರರನ್ನು ಹೊಂದಿದ್ದು, ಅವರಿಗಾಗಿ ಸುಮಾರು ೩೦,೪೯೫

ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ, ಅವುಗಳಲ್ಲಿ ೨,೦೪೦ ಸೂಕ್ಷ್ಮ ಮತಗಟ್ಟೆಗಳೆಂದು ಗುರುತಿಸಲಾಗಿದೆ. ಬಿಗಿ ಭದ್ರತಾ ವ್ಯವಸ್ಥೆ ಕೈಗೊಳ್ಳಲಾಗಿದ್ದು,ರಾಜ್ಯಾದ್ಯಂತ ಸುಮಾರು ೭೬ ಸಾವಿರ ಸಿಬ್ಬಂದಿ ನಿಯೋಜಿಸಲಾಗಿದೆ, ಅದಕ್ಕೆ ಕೇಂದ್ರ ಪಡೆಗಳ ೧೬೦ ತುಕಡಿಗಳ ನೆರವು ಒದಗಿಸಲಾಗಿದೆ. ಪುದುಚೇರಿಯಲ್ಲಿ, ೨೯೪ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದು, ೧ ಸಾವಿರದ ೦೯೯ ಮತಗಟ್ಟೆಗಳಲ್ಲಿ ೨೦೯ ಮತಗಟ್ಟೆಗಳನ್ನು ಸೂಕ್ಷ್ಮ ಮತ್ತು ಐದು ನಿರ್ಣಾಯಕ ಎಂದು ಗುರುತಿಸಲಾಗಿದೆ. ಶಾಂತಿಯುತ ಮತದಾನ ಖಾತ್ರಿಪಡಿಸಿಕೊಳ್ಳಲು ಹೆಚ್ಚುವರಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳೊಂದಿಗೆ ಸೂಕ್ಷ್ಮ ವೀಕ್ಷಕರನ್ನು ನಿಯೋಜಿಸಲಾಗಿದೆ. ಪುದುಚೇರಿಯ ಸಂಸ್ಕೃತಿ ಮತ್ತು ಪರಂಪರೆ ಪ್ರತಿಬಿಂಬಿಸುವ ವಿಶೇಷ ಥೀಮ್ ಆಧಾರಿತ ಮತ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ೩೦ ಸಂಪೂರ್ಣ ಮಹಿಳೆಯರೇ ನಿರ್ವಹಿಸುವ ಗುಲಾಬಿ ಮತಗಟ್ಟೆಗಳು, ೧೫ ಯುವಜನರೇ ನಿರ್ವಹಿಸುವ ಕೇಂದ್ರಗಳು ಮತ್ತು ಸಂಪೂರ್ಣವಾಗಿ ವಿಕಲಚೇತನರೇ ನಿರ್ವಹಿಸುವ ಎರಡು ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಎಲ್ಲಾ ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ಸೌಲಭ್ಯಗಳನ್ನು ಅಳವಡಿಸಲಾಗಿದೆ. ೨೦೨೧ ರ ವಿಧಾನಸಭಾ ಚುನಾವಣೆಯಲ್ಲಿ ದಾಖಲಾದ ಶೇಕಡಾ ೮೨.೨ ಕ್ಕೆ ಹೋಲಿಸಿದರೆ, ಈ ಬಾರಿ ಮತದಾನದ ಪ್ರಮಾಣ ಶೇಕಡಾ ೯೦ ಮೀರುತ್ತದೆ ಎಂದು ಪುದುಚೇರಿ ಮುಖ್ಯ ಚುನಾವಣಾ ಅಧಿಕಾರಿ ಪಿ. ಜವಾಹರ್ ವಿಶ್ವಾಸ ವ್ಯಕ್ತಪಡಿಸಿದರು. ಅಸ್ಸಾಂನಲ್ಲಿ, ೬೬೩ ಪುರುಷರು ಮತ್ತು ೫೯ ಮಹಿಳೆಯರು ಸೇರಿ ೭೨೨ ಅಭ್ಯರ್ಥಿಗಳು ೧೨೬ ಸ್ಥಾನಗಳಿಗೆ ಸ್ಪರ್ಧಿಸಿದ್ದಾರೆ. ೨.೫ ಕೋಟಿಗೂ ಅಧಿಕ ಮತದಾರರಿದ್ದು, ೧೮-೧೯ ವರ್ಷ ವಯಸ್ಸಿನ ೬.೪ ಲಕ್ಷಕ್ಕೂ ಅಧಿಕ ಯುವ ಮತದಾರರು ಮೊದಲ ಬಾರಿಗೆ ತಮ್ಮ ಹಕ್ಕು ಚಲಾಯಿಸಲಿದ್ದಾರೆ. ರಾಜ್ಯಾದ್ಯಂತ ಒಟ್ಟು ೩೧ ಸಾವಿರ ೪೯೦ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಇವುಗಳಲ್ಲಿ ೪,೦೨೧ ಮತಗಟ್ಟೆಗಳನ್ನು ಸಂಪೂರ್ಣವಾಗಿ ಮಹಿಳೆಯರೇ ನಿರ್ವಹಿಸಲಿದ್ದಾರೆ. ಈ ಮಧ್ಯೆ, ತಮಿಳುನಾಡಿನಲ್ಲಿ ಒಂದೇ ಹಂತದ ಮತ್ತು ಪಶ್ಚಿಮ ಬಂಗಾಳದಲ್ಲಿ ಮೊದಲ ಹಂತದ ಚುನಾವಣೆ ನಾಮಪತ್ರಗಳನ್ನು ಹಿಂಪಡೆಯಲು ಇಂದು ಕೊನೆಯ ದಿನವಾಗಿದೆ. ನಾಲ್ಕು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದ ಮತ ಎಣಿಕೆ ಮೇ ೪ ರಂದು ನಡೆಯಲಿದೆ.

<><><><>

ಕರ್ನಾಟಕದ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಭಾ ಕ್ಷೇತ್ರಗಳ ಉಪ ಚುನಾವಣೆಯ ಮತದಾನ ಪ್ರಗತಿಯಲ್ಲಿದೆ. ಬೆಳಿಗ್ಗೆ ೭ ಗಂಟೆಗೆ ಮತದಾನ ಆರಂಭವಾಗಿದ್ದು, ಸಂಜೆ ೬ವರೆಗೆ ಮುಂದುವರಿಯಲಿದೆ. ಬಾಗಲಕೋಟೆಯಲ್ಲಿ ೧ ಲಕ್ಷದ ೨೬ ಸಾವಿರದ ೭೬೧ ಪುರುಷ, ೧ ಲಕ್ಷದ ೩೨ ಸಾವಿರದ ೪೭೬ ಮಹಿಳೆ ಹಾಗೂ ೨೩ ತೃತೀಯ ಲಿಂಗಿ ಸೇರಿದಂತೆ ಒಟ್ಟು ೨ ಲಕ್ಷದ ೫೯ ಸಾವಿರದ ೨೬೦ ಮತದಾರರಿದ್ದಾರೆ. ಐದು ವಿಶೇಷ ಮತಗಟ್ಟೆಗಳು ಸೇರಿ ೩೨೨ ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು. ಕಣದಲ್ಲಿ ೯ ಅಭ್ಯರ್ಥಿಗಳಿದ್ದಾರೆ. ಇನ್ನು ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ೧ ಲಕ್ಷದ ೧೩ ಸಾವಿರದ ೬೫೪ ಪುರುಷ, ೧ ಲಕ್ಷದ ೧೭ ಸಾವಿರದ ೯೮೬ ಮಹಿಳಾ ಮತ್ತು ೪೩ ತೃತೀಯ ಲಿಂಗಿ ಮತದಾರರು ಸೇರಿದಂತೆ ಒಟ್ಟು ೨ ಲಕ್ಷದ ೩೧ ಸಾವಿರದ ೬೮೩ ಮತದಾರರಿದ್ದಾರೆ. ಕ್ಷೇತ್ರದಲ್ಲಿ ೨೮೪ ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಒಟ್ಟು ೨೫ ಅಭ್ಯರ್ಥಿಗಳು ಸ್ಪರ್ಧಾಕಣದಲ್ಲಿದ್ದಾರೆ. ಎರಡೂ ಕ್ಷೇತ್ರಗಳಲ್ಲಿ ಆಡಳಿತಾರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷ ಬಿಜೆಪಿ ನಡುವೆ ನೇರ ಸ್ಪರ್ಧೆ ಇದೆ.

<><><><>

ವಿಮಾನಗಳ ಇಳಿಯುವ ಮತ್ತು ನಿಲುಗಡೆ ಮಾಡುವ ಶುಲ್ಕದಲ್ಲಿ ಶೇಕಡ ೨೫ರಷ್ಟು ಕಡಿತ ಸೇರಿದಂತೆ ದೇಶೀಯ ವಿಮಾನಯಾನಕ್ಕೆ ಹಲವು ಸರಣಿ ಪರಿಹಾರ ಕ್ರಮಗಳನ್ನು ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಪ್ರಕಟಿಸಿದ್ದಾರೆ. ಜಾಗತಿಕ ಇಂಧನ ಬೆಲೆಗಳ ಏರಿಕೆ ನಡುವೆಯೇ ವಿಮಾನ ಪ್ರಯಾಣಿಕರಿಗೂ ಸ್ವಲ್ಪ ಮಟ್ಟಿನ ಪರಿಹಾರವನ್ನು ನೀಡುವುದನ್ನು ಖಾತರಿಪಡಿಸಲು ಹಾಗೂ ಭಾರತೀಯ ವಿಮಾಯನಯಾನ ಸಂಸ್ಥೆಗಳ ಮೇಲಿನ ಕಾರ್ಯಾಚರಣೆ ವೆಚ್ಚದ ಒತ್ತಡವನ್ನು ತಗ್ಗಿಸಲು ಈ ಕ್ರಮವನ್ನು ಕೈಗೊಳ್ಳಲಾಗಿದೆ. ಜಾಗತಿಕ ಕಚ್ಚಾತೈಲ ಬೆಲೆ ಏರಿಕೆಯಿಂದ ನಾಗರಿಕ ವಿಮಾನಯಾನ ವಲಯಕ್ಕೆ ಬಾರಿ ಪೆಟ್ಟು ಬಿದ್ದಿದೆ. ಆ ಹಿನ್ನೆಲೆಯಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದ್ದು, ವೈಮಾನಿಕ ವಲಯದಲ್ಲಿ ಸ್ಥಿರತೆ ಕಾಯ್ದುಕೊಳ್ಳುವುದು ಮತ್ತು ಪ್ರಯಾಣಿಕರಿಗೆ ಕೈಗೆಟುಕುವ ದರದಲ್ಲಿ ವಿಮಾನ ಸೇವೆ ಒದಗಿಸುವುದು ಸರ್ಕಾರದ ಆದ್ಯತೆಯಾಗಿದೆ ಎಂದು ರಾಮ್ ಮೋಹನ್ ನಾಯ್ಡು ತಿಳಿಸಿದ್ದಾರೆ.

<><><><>

ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಇಂದಿನಿಂದ ಮಾರಿಷಸ್ ಮತ್ತು ಸಂಯುಕ್ತ ಅರಬ್ ಎಮಿರೇಟ್ಸ್-ಯುಎಇಗೆ ಪ್ರವಾಸ ಕೈಗೊಳ್ಳಲಿದ್ದಾರೆ. ತಮ್ಮ ಪ್ರವಾಸದ ಮೊದಲ ಚರಣದಲ್ಲಿ, ಡಾ.

ಜೈಶಂಕರ್ ೯ನೇ ಹಿಂದೂ ಮಹಾಸಾಗರ ಸಮ್ಮೇಳನದಲ್ಲಿ ಭಾಗವಹಿಸಲು ಮಾರಿಷಸ್‌ಗೆ ಭೇಟಿ ನೀಡಲಿದ್ದಾರೆ. ಈ ವೇಳೆ ವಿದೇಶಾಂಗ ಸಚಿವರು ಮಾರಿಷಸ್‌ನ ನಾಯಕರನ್ನು ಭೇಟಿ ಮಾಡಿ ದ್ವಿಪಕ್ಷೀಯ ಸಂಬಂಧಗಳ ಪ್ರಗತಿಯನ್ನು ಪರಾಮರ್ಶಿಸಲಿದ್ದಾರೆ. ಅವರು ೯ನೇ ಹಿಂದೂ ಮಹಾಸಾಗರ ಸಮ್ಮೇಳನದಲ್ಲಿ ಪ್ರಧಾನ ಭಾಷಣ ಮಾಡಲಿದ್ದಾರೆ. ಜೊತೆಗೆ, ಡಾ. ಜೈಶಂಕರ್ ಸಮ್ಮೇಳನದಲ್ಲಿ ಭಾಗವಹಿಸುವ ಇತರ ರಾಷ್ಟ್ರಗಳ ಸಹವರ್ತಿಗಳೊಂದಿಗೆ ಚರ್ಚೆ ನಡೆಸುವ ನಿರೀಕ್ಷೆಯಿದೆ. ಈ ಭೇಟಿಯು ಭಾರತದ ನೆರೆಹೊರೆ ಮೊದಲು ನೀತಿ, ವಿಷನ್ ಮಹಾಸಾಗರ್ ಮತ್ತು ಜಾಗತಿಕ ದಕ್ಷಿಣಕ್ಕೆ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ತಮ್ಮ ಭೇಟಿಯ ಎರಡನೇ ಚರಣದಲ್ಲಿ ವಿದೇಶಾಂಗ ಸಚಿವರು ಈ ತಿಂಗಳ ೧೧ ರಿಂದ ೧೨ ರವರೆಗೆ ಯುಎಇಗೆ ಭೇಟಿ ನೀಡಲಿದ್ದಾರೆ. ಈ ವೇಳೆ ಡಾ. ಜೈಶಂಕರ್ ಯುಎಇ ನಾಯಕರನ್ನು ಭೇಟಿ ಮಾಡಿ ಎರಡೂ ದೇಶಗಳ ನಡುವಿನ ನಿಕಟ ಸಹಕಾರ ಸಂಬಂಧವನ್ನು ಪರಿಶೀಲಿಸಲಿದ್ದಾರೆ ಮತ್ತು ಸಮಗ್ರ ಕಾರ್ಯತಂತ್ರದ ಪಾಲುದಾರಿಕೆ ಮತ್ತಷ್ಟು ಬಲವರ್ಧನೆ ನಿಟ್ಟಿನಲ್ಲಿ ಸಮಾಲೋಚನೆ ನಡೆಸಲಿದ್ದಾರೆ.

<><><><>

ಗುಜರಾತ್‌ನ ಕಛ್ ಜಿಲ್ಲೆಯ ಗಡಿ ಪ್ರದೇಶದಲ್ಲಿರುವ ಸರ್ದಾರ್ ಪೋಸ್ಟ್‌ನಲ್ಲಿ ಇಂದು ಶೌರ್ಯ ದಿನ ಆಚರಿಸಲಾಗುತ್ತದೆ. ಈ ವೇಳೆ ಹಿರಿಯ ಅಧಿಕಾರಿಗಳು ಮತ್ತು ಪಡೆಯ ಸಿಬ್ಬಂದಿ ಹುತಾತ್ಮರಿಗೆ ಗೌರವ ನಮನ ಸಲ್ಲಿಸಲಿದ್ದಾರೆ ಮತ್ತು ಬ್ಯಾಂಡ್ ಪ್ರದರ್ಶನದ ಮೂಲಕವೂ ಗೌರವ ಸಲ್ಲಿಸಲಾಗುವುದು. ೧೯೬೫ ರ ಭಾರತ-ಪಾಕಿಸ್ತಾನ ಸಂಘರ್ಷದ ಸಮಯದಲ್ಲಿ ಭದ್ರತಾ ಪಡೆಗಳು ಪ್ರದರ್ಶಿಸಿದ ಅಸಾಧಾರಣ ಧೈರ್ಯ ಮತ್ತು ಶೌರ್ಯವನ್ನು ಸ್ಮರಿಸಲು ಪ್ರತಿ ವರ್ಷ ಏಪ್ರಿಲ್ ೯ ರಂದು ಶೌರ್ಯ ದಿನ ಆಚರಿಸಲಾಗುವುದು. ಏಪ್ರಿಲ್ ೧೯೬೫ ರಲ್ಲಿ, ಪಾಕಿಸ್ತಾನವು 'ಆಪರೇಷನ್ ಡೆಸರ್ಟ್ ಹಾಕ್' ಅಡಿಯಲ್ಲಿ ಭಾರತೀಯ ಗಡಿ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿತು ಎಂಬುದನ್ನು ನೆನಪಿಸಿಕೊಳ್ಳಬಹುದು.

<><><><>

ತಮಿಳುನಾಡಿನ ಕಲ್ಪಕ್ಕಂನಲ್ಲಿರುವ ಮೂಲಮಾದರಿ ಫಾಸ್ಟ್ ಬ್ರೀಡರ್ ರಿಯಾಕ್ಟರ್ ನಿರ್ಣಾಯ ಹಂತ ಸಾಧಿಸಿರುವ ಭಾರತದ ಸಾಧನೆಯನ್ನು ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯ ಮಹಾನಿರ್ದೇಶಕ ರಾಫೆಲ್ ಮರಿಯಾನೋ ಗ್ರೋಸಿ ಶ್ಲಾಘಿಸಿದ್ದಾರೆ. ಈ ಮಹತ್ವದ ಹೆಜ್ಜೆಯು ದೇಶದ ಸ್ಥಳೀಯ ಪರಮಾಣು ಕಾರ್ಯಕ್ರಮ ಮತ್ತು ದೀರ್ಘಕಾಲೀನ ಇಂಧನ ಸುಸ್ಥಿರತೆಯ

ಅನ್ವೇಷಣೆಯಲ್ಲಿ ಗಮನಾರ್ಹ ಪ್ರಗತಿ ಸೂಚಿಸುತ್ತದೆ ಎಂದು ಅವರು ತಮ್ಮ ಸಾಮಾಜಿಕ ಜಾಲತಾಣ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಭಾರತದ ಪರಮಾಣು ಕಾರ್ಯಕ್ರಮದ ಸುರಕ್ಷಿತ ಮತ್ತು ಸುಭದ್ರ ಅಭಿವೃದ್ಧಿಗೆ ಸಂಸ್ಥೆಯು ಬೆಂಬಲ ನೀಡುವುದನ್ನು ಮುಂದುವರಿಸುತ್ತದೆ ಎಂದು ಹೇಳುವ ಮೂಲಕ ಅವರು ಭಾರತಕ್ಕೆ ಯುಎಇಎಯ ಬದ್ಧತೆಯನ್ನು ಪುನರುಚ್ಚರಿಸಿದರು.

<><><><>

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿದ್ದ ಸಂಘರ್ಷವನ್ನು ಕೊನೆಗಾಣಿಸುವ ಉದ್ದೇಶದಿಂದ ಇರಾನ್ ನೊಂದಿಗೆ ನೇರ ಮಾತುಕತೆ ನಡೆಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ನೇತೃತ್ವದ ನಿಯೋಗವನ್ನು ಇಸ್ಲಾಂಬಾದ್‌ಗೆ ಕಳುಹಿಸಲಾಗುವುದು. ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕರೊಲಿನ್ ಲಿವಿಟ್ ಈ ಮಾಹಿತಿಯನ್ನು ನೀಡಿದ್ದು, ಸಂಧಾನ ನಡೆಸುವ ತಂಡದಲ್ಲಿ ಹಲವು ಹಿರಿಯ ನಾಯಕರಿರುತ್ತಾರೆ. ಮೊದಲ ಸುತ್ತಿನ ಮಾತುಕತೆ ಶನಿವಾರ ಬೆಳಗ್ಗೆ ನಡೆಯಲಿದೆ ಎಂದು ಹೇಳಿದ್ದಾರೆ. ಈ ಮಧ್ಯೆ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಕದನ ವಿರಾಮ ಘೋಷಿಸಿರುವ ಹಿನ್ನೆಲೆಯಲ್ಲಿ ಯಾವುದೇ ದಾಳಿಗಳನ್ನು ನಡೆಸಬಾರದು ಎಂದು ಹೇಳಿದ್ದಾರೆ.

**ಧ್ವನಿ : ಜೆ.ಡಿ.ವ್ಯಾನ್ಸ್ (೨೯ ಸೆಕೆಂಡ್‌ಗಳು)**

<><><><>

ಚೀನಾದ ನಿಂಗ್ಬೊದಲ್ಲಿ ನಿನ್ನೆ ನಡೆದ ೨೦೨೬ ರ ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ, ಪಿ.ವಿ.ಸಿಂಧು, ಎಚ್.ಎಸ್.ಪ್ರಣಯ್ ಮತ್ತು ಆಯುಷ್ ಶೆಟ್ಟಿ ಪ್ರಿ-ಕ್ವಾರ್ಟರ್ ಫೈನಲ್‌ಗೆ ಮುನ್ನಡೆದಿದ್ದಾರೆ. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿವಿ ಸಿಂಧು ಮಲೇಷ್ಯಾದ ವಾಂಗ್ ಲಿಂಗ್ ಚಿಂಗ್ ಅವರನ್ನು ೧೫-೨೧, ೨೧-೧೧, ೨೧-೧೯ ಅಂಕಗಳಿಂದ ಸೋಲಿಸಿದರು. ಪುರುಷರ ಸಿಂಗಲ್ಸ್ ವಿಭಾಗದಲ್ಲಿ, ಎಚ್‌ಎಸ್ ಪ್ರಣಯ್ ವಿಯೆಟ್ನಾಂನ ನ್ಗುಯೆನ್ ಹೈ ಡಾಂಗ್ ಅವರನ್ನು ೨೪-೨೨, ೨೧-೧೨ ಅಂತರದಿಂದ ಮಣಿಸಿದರು. ಆಯುಷ್ ಶೆಟ್ಟಿ, ಚೀನಾದ ವಿಶ್ವದ ೭ನೇ ಶ್ರೇಯಾಂಕಿತ ಲಿ ಶಿ ಫೆಂಗ್ ಅವರನ್ನು ೨೧-೧೩, ೨೧-೧೬ ನೇರ ಸೆಟ್‌ಗಳಿಂದ ಸೋಲಿಸುವ ಮೂಲಕ ಪ್ರಿ-ಕ್ವಾರ್ಟರ್ ಫೈನಲ್ ತಲುಪಿದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>